# ಕಿಚ್ಚ, ಕಿಚ್ಚು ಮತ್ತು ಸುಟ್ಟುಕೊಂಡವರು!

ಸುದೀಪ್ ಅವರನ್ನು ನಿಂದಿಸಿದ ಹುಡುಗನ ವಿರುದ್ಧ ನಿರ್ದೇಶಕ ನಂದಕಿಶೋರ್ ಆಕ್ರೋಶದಿಂದ ಮಾತಾಡಿದ್ದಾರೆ. ಮೇಲ್ನೋಟಕ್ಕೆ ಅಭಿಮಾನದ ಅಭಿವ್ಯಕ್ತಿಯಾಗಿ ಕಾಣಿಸುವ ಈ ಮಾತಿನ ಜಟಾಪಟಿ ಕನ್ನಡ ಚಿತ್ರರಂಗದ ಬಗ್ಗೆ, ನಟರ ಬಗ್ಗೆ, ಸಾಮಾಜಿಕ ಜವಾಬ್ದಾರಿಯ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.



ಕಳೆದ ವಾರ ಮಾಧ್ಯಮಗಳಲ್ಲಿ, ಸೋಷಿಯಲ್ ಮೀಡಿಯಾದಲ್ಲಿ ಒಂದು ವಿಡಿಯೊ ವೈರಲ್ ಆಯ್ತು. ಅದು ನಿರ್ದೇಶಕ ನಂದಕಿಶೋರ್ ಅವರು ಮಾತಾಡಿದ ವಿಡಿಯೊ. ಸುದೀಪ್ ಅವರ ವಿರುದ್ಧ ಚರಣ್ ಎಂಬ ವ್ಯಕ್ತಿ ಆಡಿದ ಮಾತುಗಳಿಗೆ ಸಿಟ್ಟಿಗೆದ್ದು ನಂದಕಿಶೋರ್ ಕಿಚ್ಚನ ಪರವಾಗಿ ಬಲವಾಗಿಯೇ ಬ್ಯಾಟ್ ಬೀಸಿದ್ದರು. ಕನ್ನಡ ಚಿತ್ರರಂಗದ ನಟನೊಬ್ಬನ ಕುರಿತಾಗಿ ಕೆಟ್ಟ ಮಾತುಗಳನ್ನು ಕೇಳಿಸಿಕೊಂಡಾಗ, ಚಿತ್ರರಂಗದ ಭಾಗವಾಗಿರುವ ಯಾರಾದರೂ ಸಿಟ್ಟೇರುವುದು ಸಹಜವೇ. ಆ ಸಹಜ ಸಿಟ್ಟು, ಆಕ್ರೋಶ ನಂದಕಿಶೋರ್ ಅವರ ಮಾತಿನಲ್ಲಿ ಎದ್ದು ಕಾಣುತ್ತಿತ್ತು. ಹಾಗೆ ನೋಡಿದರೆ ನಂದಕಿಶೋರ್ ಪ್ರತಿಕ್ರಿಯಿಸಿರದಿದ್ದರೆ ಚರಣ್ ಎಂಬ ವ್ಯಕ್ತಿ ಸುದೀಪ್ ಬಗ್ಗೆ ಆಡಿದ ಮಾತುಗಳಿಗೆ ಇಷ್ಟೊಂದು ಪ್ರಚಾರ ಖಂಡಿತ ಸಿಗುತ್ತಿರಲಿಲ್ಲ. ಆದರೆ ಈ ಕ್ರಿಯೆ–ಪ್ರತಿಕ್ರಿಯೆಗಳ ಜಟಾಪಟಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದಿಷ್ಟು ಪ್ರಶ್ನೆಗಳು ಹುಟ್ಟುವುದಂತೂ ನಿಜ.

ಸುದೀಪ್ 'ರಮ್ಮಿ' ಜಾಹೀರಾತಿನ ಭಾಗವಾಗಿದ್ದನ್ನು ವಿರೋಧಿಸಿ, ಜೂಜಿಗೆ ಬಲಿಯಾದ ಮಗನನ್ನು ತಂದೆಯೇ ಕೊಂದುಹಾಕಿದ ಘಟನೆಯನ್ನು ಉಲ್ಲೇಖಿಸಿ ಚರಣ್ ಎಂಬ ವ್ಯಕ್ತಿ ಸುದೀಪ್ ಅವರನ್ನು ನಿಂದಿಸಿ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು. ಆ ವಿಡಿಯೊದಲ್ಲಿ ಅವರು ಬಗ್ಗೆ ಆಡಿರುವ ಮಾತುಗಳು ಖಂಡಿತ ಸಭ್ಯ ಭಾಷೆಯಲ್ಲಿಲ್ಲ. ನಟ ಅಷ್ಟೇ ಅಲ್ಲ, ಯಾವ ಮನುಷ್ಯರ ಬಗ್ಗೆಯೂ ಆ ಭಾಷೆಯನ್ನು ಬಳಸುವುದು ಸಲ್ಲ. ತಮ್ಮ ಆಕ್ರೋಶಕ್ಕೆ, ಮಾತಿನ ಚಪಲಕ್ಕೆ 'ಷಂಡ', 'ನಪುಂಸಕ'ದಂಥ ಮಾತುಗಳನ್ನು ಬಳಸುವುದು ಅದನ್ನು ಬಳಸುವವರ ಕೊಳಕು ಮನಸ್ಥಿತಿಯನ್ನಲ್ಲದೇ ಇನ್ನೇನೂ ತೋರುವುದಿಲ್ಲ. ಈ ಘಟನೆಯೊಂದೇ ಅಲ್ಲದೆ ಹಲವು ಪೂರ್ವಗ್ರಹಗಳೂ ಆ ವ್ಯಕ್ತಿಗೆ ಇರುವಂತಿದೆ. ನಂದಕಿಶೋರ್ ಅವರೇ ತಮ್ಮ ವಿಡಿಯೊದಲ್ಲಿ ಹೇಳಿರುವ ಹಾಗೆ ಅದು 'ಯಾರೋ ರೋಡಲ್ಲಿ ಹೋಗುವವರು' ಆಡಿದ ಮಾತು. ಆದಕ್ಕೆ ಪ್ರತಿಕ್ರಿಯೆ ನೀಡುವ ಭರದಲ್ಲಿ ಸ್ವತಃ ನಂದಕಿಶೋರ್ ಅವರೇ 'ಗಂಡಸಾಗಿದ್ದರೆ' ಎಂಬಂಥ ಮಾತುಗಳನ್ನು ಬಳಸಿರುವುದನ್ನು ಹೇಗೆ ನೋಡಬೇಕು? ಇವರಿಗೆಲ್ಲ, ಗಂಡಿನ ಸಾಮರ್ಥ್ಯವನ್ನು ಸಾಬೀತುಪಡಿಸಲು, ಹೆಣ್ಣನ್ನು ಭೋಗಿಸುವುದನ್ನೇ ಸೂಚಿಸುವ 'ಗಂಡಸ್ತನ', 'ನಪುಂಸಕತೆ'ಯ ಆಚೆಗೆ ಬೇರೆ ಮಾಪನಗಳೇ ಕಾಣಿಸುವುದಿಲ್ಲವೇ?

'ಇಂದು ಕನ್ನಡ ಚಿತ್ರರಂಗದತ್ತ ಇಡೀ ದೇಶವೇ ತಿರುಗಿ ನೋಡುವುದಕ್ಕೆ ಇಲ್ಲಿನ ಧೀಮಂತ ನಾಯಕರೇ ಕಾರಣ' ಎಂಬ ಭಾವಾವೇಶದ ಮಾತುಗಳನ್ನೂ ಅವರು ಆಡಿದ್ದಾರೆ. 'ನಾಯಕರು' ಎಂಬುದನ್ನು ಅವರು 'ನಾಯಕ ನಟರು' ಎಂಬುದಕ್ಕೆ ಪರ್ಯಾಯವಾಗಿ ಬಳಸಿರಲಿಕ್ಕೂ ಸಾಕು. ಆದರೆ ಇಂದಿನ ಕನ್ನಡ ಚಿತ್ರರಂಗದ 'ನಾಯಕ ನಟ'ರಿಗೂ 'ಧೀಮಂತ' ಎಂಬ ಪದಕ್ಕೂ ಹಾಲು–ಸುಣ್ಣದಷ್ಟೇ ವ್ಯತ್ಯಾಸವಿದೆ. ಆ ಪದಕ್ಕೆ 'ದೂರದೃಷ್ಟಿಯುಳ್ಳ, ಸಮಾಜದ ಹಿತವನ್ನು ಬಯಸುವ ಸಹೃದಯಿ ಬುದ್ಧಿವಂತ' ಎಂದು ಅರ್ಥೈಸುವುದಾದರೆ ಇಂದಿನ ಯಾವ ನಾಯಕನ ಕಿರೀಟದ ಮೇಲೆ ಧೀಮಂತಿಕೆಯ ಕಿರೀಟ ಕೂಡಿಸುವುದು? ಹಣಕ್ಕಾಗಿ ಜೂಜಿನ ಜಾಹೀರಾತಿನಲ್ಲಿ ತಮ್ಮ ಅಭಿನಯಪ್ರತಿಭೆಯನ್ನು ತೋರುವವರಿಗೇ? ಲಂಪಟತನವನ್ನೂ ಅಭಿಮಾನಿಗಳ ಬೆಂಬಲದೊಂದಿಗೆ ಮರೆಮಾಚುವ, ಅದರ ವಿರುದ್ಧ ಮಾತಾಡುವವರು ಹೇಗಾದರೂ ಮುಗಿಸುವ ಹನುಮಭಕ್ತರಿಗೇ? ಹುಂಬತನವನ್ನೇ ಹೀರೊಯಿಸಂ ಎಂಬಂತೆ ಮೆರೆಸುವ, ಮನೆಯೊಳಗಿನ ಕೆಸರನ್ನು ಬೀದಿಗೆ ಬಂದು ಎರಚಾಡುವ ಸದಾ ಮದವೇರಿಯೇ ಇರುವ ಗಜರಾಜನಿಗೆ? ಕ್ಯಾಮೆರಾ ಎದುರಿಗೆ ಹೊಡೆವ ಹಾಗೆಯೇ ಮೀಡಿಯಾ ಎದುರಿಗೂ ಉಸಿರುಗಟ್ಟಿ ಡೈಲಾಗ್ ಹೊಡೆಯುತ್ತ ಸದಾ ಅಮಲಲ್ಲಿ ಮುಳುಗೇಳುವವರಿಗೇ? ಬರ್ತ್‌ಡೇ ಕೇಕನ್ನೂ ತಲವಾರಿನಲ್ಲಿಯೇ ಕತ್ತರಿಸುವ ರಣಕಲಿಗಳಿಗೇ? – ಯಾರು ಧೀಮಂತರು? ಯಾರು ನಮ್ಮ ಸಮಾಜದ ಒಳಿತನ್ನು ಬಯಸುವವರು? ಕಲೆಯೊಟ್ಟಿಗೇ ಇರುವ ಸಾಮಾಜಿಕ ಜವಾಬ್ದಾರಿಯ ಕುರಿತೂ ಎಚ್ಚರವಿರುವವರು? ಅವೆಲ್ಲ ಬಿಡಿ, ಈ ಚಿತ್ರರಂಗದ ಬೆಳವಣಿಗೆಯ ಪಾಲೆಲ್ಲವನ್ನೂ ಧೀಮಂತ 'ನಾಯಕ'ರಿಗೇ ಕೊಟ್ಟರೆ ನಾಯಕಿಯರಿಗೆ ಎಲ್ಲಿ ಜಾಗ ಕೊಡುತ್ತೀರಿ?

